

◆ ಸಾಮಾನ್ಯವಾಗಿ ಕನ್ನಡತನ ಎಂದ ತಕ್ಷಣ ಸಂಭಾಷಣೆ, ಚಿತ್ರತಂಡ ಕನ್ನಡದ್ದಾಗಿರಬೇಕು ಎಂಬುದು ಪಾಪ್ಯುಲರ್ ಗ್ರಹಿಕೆ. ಇದರ ಆಚೆಗೂ ತಾಂತ್ರಿಕವಾಗಿಯೂ ಒಂದು ಸಿನಿಮಾದಲ್ಲಿ ಕನ್ನಡತನ ತರಲು ಸಾಧ್ಯವಿಲ್ಲವೇ?

ನಾನಿನ್ನೂ ಸಿನಿಮಾಟೊಗ್ರಫಿ ಕಲಿಯುತ್ತಿದ್ದೇನೆ. ಕನ್ನಡ ಬಾವುಟ ತೋರಿಸಿದರೆ ಮಾತ್ರ ಕನ್ನಡತನವೇ ಎಂಬ ಪ್ರಶ್ನೆ ಎಷ್ಟೋ ಸಲ ನನ್ನನ್ನೂ ಕಾಡಿದೆ. ಒಂದು ಪಾತ್ರ ಪರದೆಯ ಮೇಲೆ ಮಾಡುವ ಚಟುವಟಿಕೆಗಳು ನಮ್ಮ ಸಂಸ್ಕೃತಿಗೆ ಹತ್ತಿರವಾಗಿದ್ದರೆ ಸಹಜವಾಗಿಯೇ ಅದಕ್ಕೊಂದು ಪ್ರಾದೇಶಿಕ ಅಧಿಕೃತತೆ, ಅಸ್ಮಿತೆ ಸಿಗುತ್ತದೆ. ಯಾರೋ ಒಬ್ಬ ಕಾರಿನಲ್ಲಿ ಕೂತು ಟ್ರಾಫಿಕ್ ಬಗ್ಗೆ ಕನ್ನಡದಲ್ಲಿ ಬೈತಿದ್ದಾನೆ ಅಂದುಕೊಳ್ಳಿ. ಆಗ ನಾವು ಅವನು ನಂಜನಗೂಡಲ್ಲೋ, ಕೋಲಾರದಲ್ಲಿಯೋ ಇದ್ದಾನೆ ಎಂದು ಅಂದುಕೊಳ್ಳುವುದಿಲ್ಲ. ಅದು ಬೆಂಗಳೂರು ಎಂದೇ ಮನಸ್ಸಿಗೆ ಗ್ರಹಿಕೆಯಾಗುತ್ತದೆ. ಹೀಗೆ ಸಂಭಾಷಣೆಯ ಹೊರತಾಗಿಯೂ ಕನ್ನಡತನವನ್ನು ಕಟ್ಟಿಕೊಡಲು ಸಾಧ್ಯ. ಇಂದಿನ ಹಲವು ನಿರ್ದೇಶಕರು ಬರಿ ಕನ್ನಡಕ್ಕೆ ಸೀಮಿತಗೊಳ್ಳದೆ ತಮ್ಮ ಸಿನಿಮಾ ಯೂನಿವರ್ಸಲ್ ಆಗಿ ಅಪೀಲ್ ಆಗಬೇಕು ಎಂದು ಬಯಸುತ್ತಾರೆ.

◆ ಕನ್ನಡತನವನ್ನು ಇಟ್ಟುಕೊಂಡೇ ಯೂನಿವರ್ಸಲ್ ಅಪೀಲ್ ಆಗಲು ಸಾಧ್ಯವಿಲ್ಲವೇ?

ಖಂಡಿತ ಸಾಧ್ಯವಿದೆ. ಸಿನಿಮಾದಲ್ಲಿ ಆಸಕ್ತಿದಾಯಕವಾಗಿ ಏನೇ ತೋರಿಸಿದರೂ ಅದು ಯೂನಿವರ್ಸಲ್ ಅಪೀಲ್ ಆಗೇ ಆಗುತ್ತದೆ. ಅದರ ಬಗ್ಗೆ ನಾವು ಹೊಸ ತಲೆಮಾರಿನವರು ಯೋಚನೆ ಮಾಡಬೇಕು. ಅದಕ್ಕೆ ನಮ್ಮತನದ ಮೇಲೆ, ನಮ್ಮ ದೈನಿಕದ ಬಗ್ಗೆ ನಂಬಿಕೆ ಇರಬೇಕು. ಒತ್ತುಶಾವಿಗೆಯನ್ನು ಪಾಕೇಟಲ್ಲಿ ತೋರಿಸಿದರೆ ಅದು ದೃಶ್ಯರೂಪದಲ್ಲಿ ನೋಡಲು ಚೆನ್ನಾಗಿರುವುದಿಲ್ಲ. ಅದರ ಒಟ್ಟು ಪ್ರಕ್ರಿಯೆಯನ್ನು ಬಿಂಬಿಸಲು ಸಾಧ್ಯವಾದರೆ ದೃಶ್ಯರೂಪದಲ್ಲಿಯೂ ಚೆನ್ನಾಗಿರುತ್ತದೆ; ಅದಕ್ಕೊಂದು ಪ್ರಾದೇಶಿಕ ಅಸ್ಮಿತೆಯೂ ಸಿಗುತ್ತದೆ. ಇಂಥ ಸಾಧ್ಯತೆಗಳ ಬಗ್ಗೆ ನಾವು ಖಂಡಿತ ಆಲೋಚಿಸಬೇಕು.

◆ ನೀವು ನಟರೂ ಹೌದು, ಸಿನಿಮಾಟೊಗ್ರಾಫರ್ ಕೂಡ ಹೌದು. ಈ ದ್ವಿಪಾತ್ರದ ಅನುಕೂಲ, ಅನನುಕೂಲಗಳೇನು?

ನನ್ನಲ್ಲಿರುವ ನಟನನ್ನು ಸಮಾಧಾನ ಮಾಡಿಕೊಂಡು ತಂತ್ರಜ್ಞನಾಗುವುದು ಸ್ವಲ್ಪ ಕಷ್ಟವೇ ಆಯ್ತು. ನಟನೆಯ ತಂತ್ರ ಗೊತ್ತಿರುವುದರಿಂದ ಹಾಗೆ ಮಾಡುವ ಬದಲು ಹೀಗೆ ಮಾಡಬಹುದಲ್ಲ ಎಂದು ಅನಿಸುತ್ತಿರುತ್ತದೆ. ಹಾಗೆಯೇ ನಟನಾಗಿ ಹೋದಾಗ ನನ್ನೊಳಗಿನ ಸಿನಿಮಾಟೊಗ್ರಾಫರ್ ಜಾಗೃತನಾಗಿಬಿಡುವುದೂ ಇದೆ. ಹೀಗಾಗಿ ನನ್ನೊಳಗಿನ ಈ ಎರಡೂ ಪಾತ್ರಗಳನ್ನು ನಾನು ನಿಯಂತ್ರಣದಲ್ಲಿ ಇರಿಸಿಕೊಳ್ಳಬೇಕು. ಅನುಕೂಲ ಏನಂದ್ರೆ, ಒಬ್ಬ ನಟನಾಗಿ ಸಿನಿಮಾಟೊಗ್ರಾಫರ್ ಸಂಕಷ್ಟ ಏನು ಅಂತ ನನಗೆ ಗೊತ್ತಿರುತ್ತದೆ. ಹಾಗೆಯೇ ಒಬ್ಬ ಸಿನಿಮಾಟೊಗ್ರಾಫರ್ ಆಗಿ ನಟನ ಸವಾಲುಗಳೂ ಗೊತ್ತಿರುತ್ತವೆ.

◆ ಕೊರೊನಾ ಭಯ ಕಳೆಯುವ ಮುನ್ನವೇ 'ಅರಿಷಡ್ವರ್ಗ' ಬಿಡುಗಡೆ ಮಾಡುತ್ತಿರುವುದು ರಿಸ್ಕ್ ಅಲ್ಲವೇ?

ಸಿನಿಮಾ ಹಾಗೆಯೇ ಡಬ್ಬಿಯೊಳಗೆ ಕೂತಿರುವಷ್ಟು ರಿಸ್ಕ್ ಏನಲ್ಲ! ಈ ಸಿನಿಮಾದ ಬರಹಗಾರ, ನಿರ್ದೇಶಕ, ನಿರ್ಮಾಪಕ ಮೂವರೂ ಅರವಿಂದ್ ಕಾಮತ್ ಅವರೇ ಆಗಿರುವುದರಿಂದ ಅವರು ಸೇಫ್ ಆಗುವುದು ಮುಖ್ಯ. ■

# ರಿ ರಿ ರಿ... ದುಬಾರಿ!



ನಂದ ಕಿಶೋರ್

ಧ್ರುವ ಸರ್ಜಾ ಅಂದಾಕ್ಷಣ ನೆನಪಿಗೆ ಬರುವುದು ಬಿಗಿದ ಮಾಂಸಖಂಡದ ಕಟ್ಟುಮಸ್ತು ದೇಹ ಮತ್ತೆ ಒಂದೇ ಉಸಿರಿಗೆ ಹೇಳಲಿಕ್ಕೂ ಕಷ್ಟವಾಗುವಂಥ, ಜೋಡಿಸಿಟ್ಟ ಇಟ್ಟಿಗೆಗಳಂಥ ರೈಮಿ ಶಬ್ದಗಳ ಡೈಲಾಗ್.

2012ರಲ್ಲಿ 'ಅದ್ದೂರಿ' ಸಿನಿಮಾ ಮೂಲಕ ಒಂದಿಷ್ಟು ತುಂಟತನದ ಪ್ರೇಮಕಥೆಯೊಟ್ಟಿಗೆ ಚಂದನವನಕ್ಕೆ ಎಂಟ್ರಿ ಕೊಟ್ಟ ಧ್ರುವ, ನಂತರ ಆನ್ ಸ್ಕ್ರೀನ್ – ಆಫ್ ಸ್ಕ್ರೀನ್ ಎರಡರಲ್ಲಿಯೂ ತಾವು ಮದ್ದಾನೆ ಎಂಬುದನ್ನು ಆಗಾಗ ತೋರಿಸಿಕೊಡುತ್ತಲೇ ಬಂದಿದ್ದಾರೆ. ಅವರು ಈ ಎಂಟು ವರ್ಷಗಳಲ್ಲಿ ಮಾಡಿರುವುದು ನಾಲ್ಕೇ ಸಿನಿಮಾಗಳು. ಅದರಲ್ಲಿ 'ಪೊಗರು' ಸಿನಿಮಾ ಇನ್ನೂ ಬಿಡುಗಡೆಯಾಗಬೇಕಾಗಿದೆ. ಆದರೆ ಕನ್ನಡದ ಹೆಚ್ಚು ಸಂಭಾವನೆ ಪಡೆಯುವ ಮೊದಲ ನಾಲ್ಕೈದು ನಟರ ಪಟ್ಟಿಯಲ್ಲಿ ಧ್ರುವ ಸರ್ಜಾ ಹೆಸರು ಖಂಡಿತ ಇರುತ್ತದೆ.

ಈ ದುಬಾರಿ ನಟನಿಗೂ 'ರ' ಅಕ್ಷರಕ್ಕೂ ಅಂತರಂಗದ ಸಂಬಂಧ ಇರುವಂತಿದೆ. ಈ ಅನುಮಾನ ಯಾಕೆ ಎಂಬುದನ್ನು ನೋಡಲು ಅವರ ಸಿನಿಮಾಗಳ ಶೀರ್ಷಿಕೆಯನ್ನೊಮ್ಮೆ ನೆನಪಿಸಿಕೊಳ್ಳಬಹುದು. 'ಅದ್ದೂರಿ', 'ಬಹದ್ದೂರ್', 'ಭರ್ಜರಿ', 'ಪೊಗರು' ಈ ಎಲ್ಲವೂ ರ ಅಕ್ಷರದಿಂದಲೇ ಕೊನೆಗೊಳ್ಳುತ್ತವೆ. ಅವುಗಳಲ್ಲಿ ಎರಡು ಸಿನಿಮಾ ಶೀರ್ಷಿಕೆ 'ರಿ'ದಿಂದ ಕೊನೆಯಾಗುತ್ತದೆ. ಅಂದಹಾಗೆ ಧ್ರುವ ಅಭಿನಯದ ಐದನೇ ಸಿನಿಮಾ ಶೀರ್ಷಿಕೆಯೂ ಇತ್ತೀಚೆಗೆ ಬಿಡುಗಡೆಗೊಂಡಿದೆ. ಅದರ ಹೆಸರು 'ದುಬಾರಿ'!

'ದುಬಾರಿ' ಸಿನಿಮಾವನ್ನು ನಂದಕಿಶೋರ್ ನಿರ್ದೇಶಿಸುತ್ತಿದ್ದಾರೆ. ಇನ್ನೂ ಬಿಡುಗಡೆಯಾಗಬೇಕಿರುವ 'ಪೊಗರು' ಸಿನಿಮಾಗೂ ನಂದಕಿಶೋರ್ ಅವರೇ ಆ್ಯಕ್ಷನ್ ಕಟ್ ಹೇಳಿರುವುದು. ತಮ್ಮ ಕಾಂಬಿನೇಷನ್ ಬಗ್ಗೆ ಅವರಿಗೆ ಗಟ್ಟಿಯಾದ ವಿಶ್ವಾಸ ಇರುವಂತಿದೆ. ಜೊತೆಗೆ ಸಿನಿಮಾ ನಾಮಬಲದ ಕುರಿತೂ ಅಷ್ಟೇ ನಂಬಿಕೆ ಇಟ್ಟುಕೊಂಡಿರುವಂತಿದೆ.

ಮನುಷ್ಯರನ್ನೂ ವಸ್ತುಗಳನ್ನೂ ಸಮಾನ ಉತ್ಸಾಹದಿಂದ ಪುಡಿಗಟ್ಟುವ ಧ್ರುವ ಅವರಿಗೆ ಅಭಿನಯ ತುಸು ದುಬಾರಿಯ ಸಂಗತಿಯೇ. ಆದರೆ ಅವರ ಮೈಕಟ್ಟು ಮತ್ತು ತುಡುಗು ಮ್ಯಾನರಿಸಂ ಬಳಸಿಕೊಂಡು ಮಾಸ್ ಅಭಿಮಾನಿಗಳನ್ನು ರಂಜಿಸುವ ಸೂತ್ರ ನಂದಕಿಶೋರ್‌ಗೆ ಚೆನ್ನಾಗಿಯೇ ಗೊತ್ತು. ಪಂಚಿಂಗ್ ಡೈಲಾಗ್ ವೀರ ಪ್ರಶಾಂತ್ ರಾಜಪ್ಪ ಅವರ ಸಂಭಾಷಣೆಯ ಬಲವೂ 'ದುಬಾರಿ' ಸಿನಿಮಾಗಿದೆ. ಹಾಗಾಗಿ ಧ್ರುವ ಗಲ್ಲಾಪೆಟ್ಟಿಗೆ ಗೆಲುವಿನ ಓಟ ಮುಂದುವರಿದು ಅವರು ಇನ್ನಷ್ಟು 'ದುಬಾರಿ'ಯಾದರೂ ಅಚ್ಚರಿಯೇನಿಲ್ಲ. ■

